ಶ್ರೀ ಎಸ್ ಎಸ್ ಪಾಟೀಲ್ ಪ್ರಕಾಶರವರು ಹೇಳಿದ ಹಾಗೆ ಇದು ಬಹಳ ಮಹತ್ವದ್ದು, ಸುಮ್ಮನೆ ಅಲ್ಲಿ ಬಡವರನ್ನು ದುಡಿಸಿಕೊಳ್ಳುತ್ತೀರಿ? ಪರಿಶೀಲನೆ ಮಾಡುತ್ತೇವೆಂದರೆ ಹೇಗೆ? ದಯವಿಟ್ಟು ಅವರನ್ನು ಖಾಯಂ ಮಾಡುತ್ತೇವೆಂದು ಹೇಳಿ

ಡಾ॥ ಕೆ ಅನ್ನದಾನಿ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ, ನಮಗೆ ಸ್ಪಷ್ಟವಾದಂಥ ಹೇಳಿಕೆಯನ್ನು ಮಾನ್ಯ ಸಚಿವರು ಹೇಳಬೇಕು

ಶ್ರೀ ಎಸ್,ಎಸ್,ಪಾಟೀಲ್ ಇಡೀ ಸದನ ಸೇರಿ ನಿಮಗೆ ರರಾವು ಮಾಡಿ ಕೊಡುತ್ತೇವೆ ನಾವು ಸಪೋರ್ಟ್ ಮಾಡುತ್ತೇವೆ ಕಮಿಟಿಯಲ್ಲಿ ಇಡಿ ಆಗ ಯಾರೂ ಇದಕ್ಕೆ ವಿರೋಧ ಮಾಡುವುದಿಲ್ಲ

ಡಾ॥ ಕೆ ಅನ್ನದಾನಿ ನಾವು ಸ್ಪಷ್ಟವಾದಂಥ ಉತ್ತರವನ್ನು ಕೇಳುತ್ತಿದ್ದೇವೆ

ಉಪಾಧ್ಯಕ್ಷರು ಅನ್ನದಾನಿಯವರೇ, ಒಂದೊಂದು ಪ್ರಶ್ನೆಗೆ 15–15 ನಿಮಿಷ ತೆಗೆದುಕೊಂಡರೆ ಮುಂದಕ್ಕೆ ಹೋಗುವುದಕ್ಕಾಗುವುದಿಲ್ಲ

ಶ್ರೀ ಜಗದೀಶ್ ಶೆಟ್ಟರ್ ನಾವು ಈ ಪ್ರಸ್ತಾವನೆಯನ್ನು ಹಣಕಾಸು ಇಲಾಖೆಗೆ ಕಳುಹಿಸುತ್ತೇನೆ ಹಾಗೆಯೇ ಇದನ್ನು ಕ್ಯಾಬಿನೆಟ್‌ನಲ್ಲಿ ಮಂಡಿಸುತ್ತೇನೆ ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ ಖಾಯಂ ಮಾಡುವ ಬಗ್ಗೆ We will take a decision

ಉಪಾಧ್ಯಕ್ಷರು ರಘುಪತಿ ಭಟ್

152 (1377) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ವಾಸ್ತವ್ಯವಿದ್ದು, ಹಕ್ಕುಪತ್ರ ಪಡೆಯಲು ಅರ್ಹರಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ಗ್ರಾಮ ಪಂಚಾಯತಿವಾರು ಮಾಹಿತಿ ನೀಡುವುದು),

ಆ) ಆ ಪೈಕಿ ಕಂದಾಯ ಅಧಿನಿಯಮ 94ಸಿ ರಡಿ ಅರ್ಜಿ ನೀಡಿದವರ ಸಂಖ್ಯೆ ಎಷ್ಟು,

ಇ) ಈ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ವಿಳಂಬವಾಗಲು ಕಾರಣವೇನು, ಇವರೆಲ್ಲರಿಗೆ ಗ್ರಾಮ ಪಂಚಾಯತದ ವಸತಿ ಸಮಿತಿ ಮೂಲಕ ಹಕ್ಕು ಪತ್ರ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು,

ಈ) ಕಂದಾಯ ಅಧಿನಿಯಮ 94ಸಿ ಯಡಿಯಲ್ಲಿ ಇವರಿಗೆ ಹಕ್ಕುಪತ್ರ ನೀಡಲು ಅವಧಿ ವಿಸ್ತರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಜಗದೀಶ್ ಶೆಟ್ಟರ (ಕಂದಾಯ ಸಚಿವರು)

ಅ) 911 (ಗ್ರಾಮ ಪಂಚಾಯತ್ ವಾರು ಮಾಹಿತಿ ಲಗತ್ತಿಸಿದೆ)

ಆ) 2060

ಇ) ಒಟ್ಟು 911 ಪೈಕಿ ಅರ್ಜಿಗಳ ಪೈಕಿ ಈಗಾಗಲೇ 745 ಮಂದಿಗೆ ಹಕ್ಕುಪತ್ರ ನೀಡಲಾಗಿದೆ ಉಳಿದ 166 ಮಂದಿಗೆ ಸ್ಥಳಮೌಲ್ಯ ಪಾವತಿಸಲು ಬಾಕಿ ಇರುವುದರಿಂದ ಹಕ್ಕುಪತ್ರ ನೀಡಿಲ್ಲ ಇವರು ಸ್ಥಳ ವಿತರಿಸಲು ಕ್ರಮ ಕೈಗೊಳ್ಳಲಾಗುವುದು 94ಸಿ ಅರ್ಜಿದಾರರಿಗೆ ವಸತಿ ಸಮಿತಿ ಮೂಲಕ ಹಕ್ಕುಪತ್ರ ನೀಡಲು ಅವಕಾಶವಿರುವುದಿಲ್ಲ

ಈ) ಈಗಾಗಲೇ 94ಸಿ ರಡಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡುವ ಅವಧಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಡಿ 59 ಎಲ್‌ಜಿಪಿ 2005, ದಿನಾಂಕ 20 03 2006 ರಲ್ಲಿ ದಿನಾಂಕ 31/10/2007 ರ ವರೆಗೆ ವಿಸ್ತರಿಸಲಾಗಿದೆ

ಅನುಬಂಧ

ಉಡುಪಿ ಜಿಲ್ಲೆಯ ವಿಧಾನಸಭಾ ಕ್ಷೇತ್ರದ ಗ್ರಾಮ ಪಂಚಾಯತವಾರು ಅರ್ಹ ಫಲಾನುಭವಿಗಳ ವಿವರ

ಕ್ರ ಸಂ	ಗ್ರಾಮದ ಹೆಸರು	ಹಕ್ಕುಪತ್ರ ನೀಡಲಾದ ಸಂಖ್ಯೆ
1	ಕೊಡವೂರು	ನಗರ ಸಭೆ ವ್ಯಾಪ್ತಿ–457
2	ಪುತ್ತೂರು	
3	ಹೆರ್ಗಾ	
4	ಶಿವಳ್ಳಿ	
5	76 ಬೆಡಗಬೆಟ್ಟು	
6	ಮೂಡನಿಡಂಬೂರು	
7	ತೆಂಕನಿಡಿವೂರು	40
8	ಉಡ್ಯಾವರ	27
9	ಅತ್ರಾಡಿ	22
10	ಕಡೆಕಾರ್	10
11	ಅಂಬಾಲಪಾಡ್ಯ	18
12	ಮನಿಪೂರ	23

13	ಅಂಜಾರ್	63
14	80 ಬೆಡಗಬೆಟ್ಟು	78
15	ಕೊರಂಗರಪಾಡಿ	5
16	ಬೊಮ್ಮರಬೆಟ್ಟು	62
17	ಪೆರ್ನಾಂಕಿಲಾ	8
18	ಅಲಗೂರು	96
19	ಬಡಾನಿಡ್ಯೂರು	2
	ಒಟ್ಟು	911

ಶ್ರೀ ಕೆ ರಘುಪತಿ ಭಟ್ ಉತ್ತರವನ್ನೇನ್ನೋ ಒದಗಿಸಿದ್ದಾರೆ, ಆದರೆ ಅವರು ಕೊಟ್ಟಂತಹ ಉತ್ತರದಲ್ಲಿ ತಾಲ್ಲೂಕಿನಿಂದ ಬಂದ ವರದಿಯಿರಬಹುದು, ಆದರೆ ಇದರಲ್ಲಿ ಸ್ವಲ್ಪ ತಪ್ಪಿದೆ, ಏಕೆಂದರೆ ಒಟ್ಟು ಬಾಕಿ ಇರುವುದು 911 ಅರ್ಜಿಗಳು ಮಾತ್ರ ಎಂದು ಹೇಳಿದ್ದಾರೆ ಅದಿ ಬಿಟ್ಟು ನನಗೆ ಗೊತ್ತಿರುವ ಮಟ್ಟಿಗೆ ಎರಡು ಪಂಚಾಯಿತಿಗಳೂ ಅಲೆವೂರು, 80 ಬೆಡಗಬೆಟ್ಟು ಪಂಚಾಯತ್‌ನಲ್ಲಿ ಒಂದು ಅರಣ್ಯ ಪ್ರದೇಶದ ಜಾಗವೆಂದು ಹೇಳುವಂಥಾದ್ದು, ಆದರೆ ಅದು ಅರಣ್ಯದ ಜಾಗವಾಗಿಲ್ಲ ಅಲ್ಲಿ ಹಿಂದೆ ಹಕ್ಕು ಪತ್ರವನ್ನು ಕೊಟ್ಟಿದ್ದರು ಈಗ ಅದಕ್ಕೆ ಅರಣ್ಯ ಜಾಗವೆಂದು ಹೇಳಿ ಆ ಹಕ್ಕುಪತ್ರವನ್ನು ರದ್ದುಗೊಳಿಸಿದ್ದಾರೆ ಅಂದದ್ದೇ ಈಗ ಸುಮಾರು 500–600 ಕೇಸುಗಳಿವೆ ಇನ್ನೊಂದು ಮಾನ್ಯ ಕಂದಾಯ ಸಚಿವರು ಮಲ್ಪೆ ಪ್ರದೇಶದಲ್ಲಿ ಸರ್ವೆ ನಂಬರ್‌ಗೆ ಸುಮಾರು 53 ಎಕರೆಯನ್ನು ಸೇರಿಸಿದ್ದರು ಅಲ್ಲಿ ಇನ್ನೂ 500–600 ಜನರಿಗೆ ಕೊಡಲಿಕ್ಕೆ ಬಾಕಿ ಇದೆ, ಅದೇ ಸುಮಾರು 1,200 ಆಗುತ್ತದೆ ಅದರಿಂದ 911 ಫಲಾನುಭವಿಗಳು ಎಂಬುದು ಸರಿಯಾದ ಉತ್ತರವಲ್ಲ ಆದ್ದರಿಂದ ತಕ್ಷಣ ಬಾಕಿ ಇರುವಂಥಾದ್ದು, ಈಗಾಗಲೇ 31 10 2007 ರವರೆಗೆ ವಿಸ್ತರಿಸಲಾಗಿದೆಯೆಂದು ಹೇಳಿದರು ಆದರೆ 94(ಸಿ) ಅರ್ಜಿಗಳನ್ನು ವಿಲೇವಾರಿ ಮಾಡಲಿಕ್ಕೆ ಅಧಿಕಾರಿಗಳು ತುಂಬಾ ನಿರ್ಲಕ್ಷ್ಯ ಭಾವನೆಯನ್ನು ತೋರುತ್ತಿದ್ದಾರೆ ಅವರಿಗೆ ತಕ್ಷಣ ಒಂದು ದಿನವನ್ನು ನಿಗದಿ ಮಾಡಿ ಅಷ್ಟರಲ್ಲಿ ಎಲ್ಲವನ್ನು ಸಂಪೂರ್ಣ ಮಾಡಬೇಕೆಂಬ ಒಂದು ಆದೇಶವನ್ನು ಹೊರಡಿಸುವಂತೆ ವಿನಂತಿಸುತ್ತೇನೆ ಇನ್ನೊಂದು ನಾನು 94(ಸಿ) ಯಡಿಯಲ್ಲಿ ಅರ್ಜಿ ವಿಸ್ತರಣೆ ಬಗ್ಗೆ ಕೇಳಿದ್ದೆ ಆದರೆ ಅದು ಇಲ್ಲಿ ಬರುವಾಗ ಹಕ್ಕುಪತ್ರ ನೀಡಲು ಅವಧಿ ವಿಸ್ತರಣೆ ಎಂದು ಆಗಿದೆ ಅದು ತಪ್ಪು, ನಾನು ಇವತ್ತು ಕಂದಾಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುವಂಥಾದ್ದು ಏನೆಂದರೆ

ಹಿಂದಿನ ಸರ್ಕಾರಗಳು 94(ಸಿ)ಯಡಿಯಲ್ಲಿ ಯಾರು 2,3,5 ಸೆಂಟ್ಸ್ ಒಳಗೆ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಅವರಿಗೊಮ್ಮೆ ಸಕ್ರಮೀಕರಣ ಮಾಡಲಿಕ್ಕೆ 94(ಸಿ) ಅರ್ಜಿಯನ್ನು ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಿತ್ತು ಆದರೆ ಆ ಸಂದರ್ಭದಲ್ಲಿ 15–20 ವರ್ಷಗಳ ಹಿಂದೆ ಸಹಿತ ಮನೆಯನ್ನು ಕಟ್ಟಿಕೊಂಡು ಇವತ್ತು ವಾಸಿಸುತ್ತಿರುವವರಿಗೆ 94(ಸಿ)ಯಡಿಯಲ್ಲಿ ಅರ್ಜಿ ಕೊಡಲಿಕ್ಕೆ ಕೆಲವರಿಗೆ ಅನುಭವದ ಕೊರತೆಯಿಂದ, ಮಾಹಿತಿಯ ಕೊರತೆಯಿಂದ ಅರ್ಜಿಯನ್ನು ಕೊಡಲಿಕ್ಕಾಗಲಿಲ್ಲ ನಮ್ಮ ಕರಾವಳಿ ಭಾಗದಲ್ಲಿ, ಬೇರೆ ಕಡೆಯಲ್ಲಿಯೂ ಇರಬಹುದು, ನನಗೆ ಗೊತ್ತಿಲ್ಲ ನಮ್ಮ ಕಡೆಯಲ್ಲಿ ಒಂದೆರಡು ಮೂರು ಜಿಲ್ಲೆಗಳಲ್ಲಿ ಇಂಥ ಸಾಕಷ್ಟು ಪ್ರಕರಣಗಳಿವೆ ನನ್ನ ಕ್ಷೇತ್ರವೊಂದರಲ್ಲೇ ಸುಮಾರು 1,000 ಕ್ಕಿಂತ ಉಳಿದ ಅರ್ಜಿಗಳು ಇನ್ನೂ ಕೊಡಲಿಕ್ಕೆ ಬಾಕಿ ಇದೆ, ಒಂದು ಕಡೆ ಸರ್ಕಾರಕ್ಕೆ ಅವರನ್ನು ವೆಕೇಟ್ ಮಾಡಿಸಲಿಕ್ಕಾಗಲಿಲ್ಲ

ಉಪಾಧ್ಯಕ್ಷರು ಏನು ಭಾಷಣ ಮಾಡುತ್ತಿದ್ದೀರಿ ಪ್ರಶ್ನೆಯಲ್ಲ ಇದು, ನಿಜವಾಗಲೂ ಭಾಷಣವಿದು ಅಷ್ಟು ಡಿಟೇಲ್ ಆಗಿ ಪ್ರಶ್ನೋತ್ತರದಲ್ಲಿ ವಿಷಯವನ್ನು ಹೇಳುವುದಕ್ಕಾಗುವುದಿಲ್ಲ ಪ್ರಶ್ನೆಗೆ ಉತ್ತರ ಕೇಳಿ ಅಷ್ಟೆ.

ಶ್ರೀ ಕೆ ರಘುಪತಿ ಭಟ್ ಉತ್ತರವನ್ನು ಕೇಳುತ್ತಿದ್ದೇನೆ ಇವತ್ತು 1000 ಕ್ಕೂ ಉಳಿದು ನನ್ನ ಒಂದು ಕ್ಷೇತ್ರದಲ್ಲಿ ಮನೆ ಕಟ್ಟಿಕೊಂಡಿರುವವರು ಹಕ್ಕುಪತ್ರ ಕೊಡಲಿಕ್ಕಾಗಲಿಲ್ಲ ಅವರಿಗೆ ಮನೆ ನಂಬರ್ ಇಲ್ಲದೆ tax collection ಆಗುತ್ತಿಲ್ಲ ಇನ್ನು ಅವರನ್ನು ಎಲ್ಲಿಯಾದರೂ ವೆಕೇಟ್ ಮಾಡಲಿಕ್ಕೆ ಒಂದು ಕಾನೂನು ಇವತ್ತು ಹೊಸದಾಗಿ ಬಂದು ಕ್ರಿಮಿನಲ್ ಕೇಸು ಹಾಕಾಗಿ ಬಂದರೆ ಅದೊಂದು ಸಮಸ್ಯೆಯಾಗುತ್ತದೆ ಆದ್ದರಿಂದ ನನ್ನವಿನಂತಿ ಏನೆಂದರೆ ಕನಿಷ್ಠ 6 ತಿಂಗಳು ಅಥವಾ 3 ತಿಂಗಳು ಆಗಲಿ, ಅವಧಿಯನ್ನು ವಿಸ್ತರಣೆ ಮಾಡಬೇಕು ಇಲ್ಲಿಯವರೆಗೆ ಕಂದಾಯ ಇಲಾಖೆಯಲ್ಲಿ ಯಾರ್ಯಾರು ಮನೆಗಳನ್ನು ಕಟ್ಟಿಕೊಂಡಿದ್ದಾರೆಂಬ ಬಗ್ಗೆ ಮಾಹಿತಿ ಇದೆ ಅವರಿಗೆಲ್ಲಾ ಒಂದು ಫೋಟೋ ತೆಗೆದು ಅರ್ಜಿ ಕೊಡಲಿಕ್ಕೆ ಮತ್ತೊಂದು ಅವಧಿಯನ್ನು ವಿಸ್ತರಣೆ ಮಾಡಬೇಕು, ಇದು ಬಹಳ ವರ್ಷಗಳಿಂದ ಇರುವ ಬೇಡಿಕೆ, ಒಂದು ಬಾರಿ ತಾವು 94(ಸಿ) ಅರ್ಜಿ ಅರ್ಜಿಯನ್ನು ಕೊಡಲಿಕ್ಕೆ ಅವಧಿಯನ್ನು ವಿಸ್ತರಣೆ ಮಾಡಬೇಕು ನನ್ನ ಕ್ಷೇತ್ರದಲ್ಲಿಯೇ ಸುಮಾರು 1000ಕ್ಕೂ ಹೆಚ್ಚು ಜನ ಅರ್ಜಿ ಕೊಡುವವರಿದ್ದಾರೆ ಇನ್ನು ಬೇರೆ ಜಿಲ್ಲೆಗಳಲ್ಲಿಯೂ ಸಹ ಜಾಸ್ತಿ ಜನರಿರಬಹುದು ಅದಕ್ಕೆ ಮಾನ್ಯ ಸಚಿವರು ಮಾನವೀಯತೆಯ ದೃಷ್ಟಿಯಿಂದ ಮಾಡಬೇಕು ಇಲ್ಲಿದಿದ್ದರೆ ಕಾನೂನು ದೃಷ್ಟಿಯಿಂದಲೂ ತೊಂದರೆಯಾಗುತ್ತದೆ ಮತ್ತು ಈಗ ವಾಸಿಸುತ್ತಿರುವವರಿಗೂ ತೊಂದರೆಯಾಗುತ್ತದೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಹೆಚ್ಚಿನವರೆಗೆ ತಾತ್ಕಾಲಿಕ ಮಂಜೂರಾತಿಯನ್ನು ಕೊಡುತ್ತಿದ್ದೀರಿ ಖಾಯಂ ಮಂಜೂರಾತಿ ಕೊಡುತ್ತಿಲ್ಲ

ಕೆಲವು ಕಡೆ ಕಡತ ಕಳೆದು ಹೋಗಿರುವಂಥ ಪರಿಸ್ಥಿತಿ ಇದೆ ಕಡತ ಕಳೆದು ಹೋದರೆ ಆ ಅರ್ಜಿದಾರರು ಜವಾಬ್ದಾರಿಯಾಗುತ್ತಾರೆಯೇ? ಯಾರು ಕಡತ ಕಳೆದುಹೋಗಿದೆ ಎಂದು ಹೇಳುತ್ತಾರೋ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು ಅತೀ ಶೀಘ್ರದಲ್ಲಿ ತಾತ್ಕಾಲಿಕ ಮಂಜೂರಾತಿ ಕೊಟ್ಟವರಿಗೆ ಖಾಯಂ ಮಂಜೂರಾತಿ ಕೊಡುವ ವ್ಯವಸ್ಥೆಯಾಗಬೇಕು, ಇದ್ದ ಅರ್ಜಿಗಳನ್ನೆಲ್ಲಾ ಅತೀ ಶೀಘ್ರವಾಗಿ ಪರಿಹಾರ ಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡಬೇಕು

ಶ್ರೀ ಕೆ ಪ್ರಭಾಕರ ಬಂಗೇರ ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದಂತೆ ನಮ್ಮ ತಾಲ್ಲೂಕಿನಲ್ಲಿ 94ಸಿ ಅಡಿಯಲ್ಲಿ ಆಗಿರುವಂತಹ ಅರ್ಜಿಗಳು ವಿಲೇವಾರಿ ಆಗಲಿಕ್ಕೆ ಬಾಕಿ ಇದೆ ಅದರ ನಂತರವೂ ಕೂಡ ನಾವು ಯೋಚಿಸಿದಾಗ, ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಕೂಡ ನೋಡಿದಾಗ, ಇನ್ನೂ ಕೂಡ ಮನೆಯನ್ನು ಕಟ್ಟಿಕೊಂಡು 2,3,5 ಸೆಂಟ್ಸ್ ಜಾಗದಲ್ಲಿ ಕುಳಿತವರು ಇದ್ದಾರೆ ಅವರಿಗೆ ಇನ್ನೊಂದು ಅವಕಾಶವನ್ನು ಮಾಡಿಕೊಡದೇ ಇದ್ದರೆ ಅವರಿಗೆ ಬಹಳ ಕಷ್ಟವಾಗುತ್ತದೆ, ಅವರಿಗೆ ಬೇರೆ ಯಾವುದೇ ರೀತಿಯಲ್ಲಿ ಉಪಕಾರ ಮಾಡಲಿಕ್ಕಾಗುವುದಿಲ್ಲ ಹಾಗಾಗಿ ಸರ್ಕಾರ ಅದಕ್ಕಾಗಿಯೇ ಅವಧಿ ವಿಸ್ತರಣೆಯನ್ನು ಮಾಡಬೇಕು ಅದೇ ಇದ್ದ ಅರ್ಜಿಗಳನ್ನು ಆದಷ್ಟು ಶೀಘ್ರವಾಗಿ ವಿಲೇವಾರಿ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ ಅದು ತಹಶೀಲ್ದಾರರ ಮಟ್ಟದಲ್ಲಿ ಆಗುವುದರಿಂದ ಅದನ್ನೂ ಕೂಡ ಶೀಘ್ರದಲ್ಲಿ ಮಾಡಬೇಕೆಂದು ತಮ್ಮ ಮೂಲಕ ನಾನು ಒತ್ತಾಯಿಸುತ್ತೇನೆ

ಶ್ರೀ ಶಕುಂತಲಾ ಟಿ ಶೆಟ್ಟಿ ಮಾನ್ಯ ಅಧ್ಯಕ್ಷರೆ, ಇದು ಇಡೀ ಕರಾವಳಿ ಜಿಲ್ಲೆಯ 15 ಶಾಸಕರುಗಳ ಕ್ಷೇತ್ರಗಳಲ್ಲಿ ಈ ಪರಿಸ್ಥಿತಿ ಅನುಭವಕ್ಕೆ ಬಂದಿರುವಂಥಾದ್ದು ಆದಕಾರಣ ಮತ್ತೊಮ್ಮೆ ಎಲ್ಲರಿಗೂ ಅವಕಾಶ ಕೊಡಬೇಕೆಂದು ನಾನೂ ಇದಕ್ಕೆ ಪೂರಕವಾಗಿ ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಎನ್ ಯೋಗೀಶ್ ಭಟ್ ' ಸನ್ಮಾನ್ಯ ಸಚಿವರು particularly 94(c) ಪ್ರಕಾರ ಹೆಚ್ಚಿನ ಅವಕಾಶ ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ

ಶ್ರೀ ಕೆ ರಘುಪತಿ ಭಟ್ ಕೆಲವೊಮ್ಮೆ ಅರ್ಜಿಗಳನ್ನು ಕೊಟ್ಟಿದ್ದಾರೆ ಆದರೆ, ಈ ಹಿಂದೆ Village Accountant ಅಲ್ಲಿಗೆ ಹೋದಾಗ ಅವರು ವಾಸ್ತವ್ಯ ಇಲ್ಲವೆಂದು ಮಾಹಿತಿ ಕೊಟ್ಟಿದ್ದರ ಮೇರೆಗೆ reject ಮಾಡಿದ್ದಾರೆ ಅವರು ಅಲ್ಲಿ ವಾಸಿಸುತ್ತಿದ್ದಾರೆ Reject ಆದ ಕಾರಣವೇನೆಂದರೆ, ಅವರು ಅಲ್ಲಿ ವಾಸ್ತವ್ಯ ಇಲ್ಲವೆಂದು ವಾಸ್ತವ್ಯ ಇಲ್ಲವೆಂದು ಕೆಲವು ಕಾರಣಗಳನ್ನು ತೆಗೆದುಕೊಂಡರೆ, Village Accountants ಕೆಲವು ವ್ಯವಹಾರಗಳನ್ನು ಮಾಡಿಕೊಂಡು ವಾಸ್ತವ್ಯ ಇಲ್ಲವೆಂದು ಹೇಳಿದ್ದಾರೆಂಬುದು ನಾವು ಮೂಲಕ್ಕೆ ಹೋಗುವಾಗ ಗೊತ್ತಾಗುತ್ತಿದೆ ಆದುದರಿಂದ, ಈಗ ಅರ್ಜಿಗಳನ್ನು ಕೊಟ್ಟಿದ್ದರೂ ಯಾರ್ಯಾರ ಅರ್ಜಿಗಳು reject

ಆಗಿವೆಯೋ, ಅವರೆಲ್ಲರ ಅರ್ಜಿಗಳ ಮರುಪರಿಶೀಲನೆ ಮಾಡಿ ಮತ್ತೊಮ್ಮೆ ತನಿಖೆ ಮಾಡುವ ಮೂಲಕ ಅವರು ಅಲ್ಲಿ ಇದ್ದಾರೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು 94(c) ರ ಪ್ರಕಾರ ಸಲ್ಲಿಸಿದ್ದವರ ಅರ್ಜಿಗಳು reject ಆದದ್ದಕ್ಕೆ ಮರು ಪರಿಶೀಲನೆಗೆ ಒಂದು ಅವಕಾಶ ಕೊಡುವಂತಹ ವ್ಯವಸ್ಥೆಯಾಗಬೇಕು

ಶ್ರೀ ಜಗದೀಶ್ ಶೆಟ್ಟರ್ ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಘುಪತಿ ಭಟ್‌ರವರು ಏನು ಈ ಪ್ರಶ್ನೆ ಕೇಳಿದ್ದಾರೆ, ಅವರು ಉಡುಪಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಳಿದ್ದರೂ ಇಡೀ ರಾಜ್ಯಕ್ಕೆ ಇದು ಅನ್ವಯವಾಗುತ್ತದೆ ಈಗಾಗಲೇ ಉಡುಪಿ ಕ್ಷೇತ್ರದಲ್ಲಿ ಒಟ್ಟು 2,060 ಅರ್ಜಿಗಳೂ ಬಂದಿದ್ದು, ಅದರಲ್ಲಿ 911 ಅರ್ಜಿಗಳಿಗೆ ನಾವು ಮಂಜೂರಾತಿ ಕೊಟ್ಟಿದ್ದೇವೆ, 240 ಅರ್ಜಿಗಳು ವಿಚಾರಣೆಗೆ ಬಾಕಿ ಇವೆ 909 ಅರ್ಜಿಗಳು ತಿರಸ್ಕೃತಗೊಂಡಿದೆ ಮತ್ತು 745 ಮಂದಿಗೆ ಹಕ್ಕು ಪತ್ರಗಳನ್ನು ನೀಡಿದ್ದು, ಉಳಿದ 166 ಮಂದಿಗೆ ಸ್ಥಳ ಮೌಲ್ಯವನ್ನು ಪಾವತಿಸದಿರುವ ಕಾರಣ ಅವರುಗಳಿಗೆ ಹಕ್ಕುಪತ್ರಗಳನ್ನು ನೀಡಿರುವುದಿಲ್ಲ ಈ ರೀತಿ ಉಡುಪಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದೆ ಮುಖ್ಯವಾಗಿ, ಹೊಸದಾಗಿ ಅರ್ಜಿಗಳನ್ನು ಕೊಡುವುದಕ್ಕೆ ಅವಧಿಯನ್ನು ವಿಸ್ತರಣೆ ಮಾಡಬೇಕೆಂಬ ಬೇಡಿಕೆ ಬಗ್ಗೆ ಬಹುತೇಕ ಎಲ್ಲ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ಮೊದಲು ಇದನ್ನು ದಿನಾಂಕ 14 4 98 ಕ್ಕೆ ಅವಧಿ ನಿಗದಿಪಡಿಸಲಾಗಿತ್ತು ದಿನಾಂಕ 14 4 98ಕ್ಕೂ ಮುನ್ನ ಅಲ್ಲಿ ಯಾರೂ ಕಬ್ಜಾದಲ್ಲಿದ್ದರು, enjoyment ನಲ್ಲಿದ್ದರು, ಅವರು 94(c) ರೀತ್ಯಾ ಅರ್ಜಿ ಕೊಡಬೇಕೆಂದಿತ್ತು ಅದರ ಪ್ರಕಾರ ಅರ್ಜಿ ಕೊಟ್ಟಿದನ್ನು ಇವತ್ತು consider ಮಾಡಿದ್ದೇವೆ ಮತ್ತೆ ಮುಂದೆ ಅದನ್ನು ದಿನಾಂಕ 1 4 2001 ರವರೆಗೆ ವಿಸ್ತರಿಸಿದ್ದೇವೆ ಅಲ್ಲಿಂದ ದಿನಾಂಕವನ್ನು ಪುನಃ ವಿಸ್ತರಿಸಿಲ್ಲ ಆದರೆ, ಯಾವ್ಯಾವ ಕೇಸುಗಳು, ಅರ್ಜಿಗಳು ಪೆಂಡಿಂಗ್ ಇವೆಯೋ, ಅವುಗಳನ್ನು dispose ಮಾಡುವುದಕ್ಕೆ ಅವಧಿಯನ್ನು ನಾವು ಹಂತ ಹಂತವಾಗಿ ವಿಸ್ತರಣೇ ಮಾಡುತ್ತಾ ಬಂದಿದ್ದೇವೆ ಈ ದಿನಾಂಕ 31 10 2007 ರೊಳಗಾಗಿ ಯಾವ್ಯಾವ cases pending ಇವೆಯೋ, ಅರ್ಜಿಗಳಿವೆಯೋ, ಅವುಗಳನ್ನೆಲ್ಲವನ್ನೂ dispose ಮಾಡಲು ನಾವು ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ ಇವತ್ತು ಮತ್ತೆ ಅವಧಿಯನ್ನು ವಿಸ್ತರಣೆ ಮಾಡಬೇಕೆಂದು ಏನು ಕೇಳುತ್ತಿದ್ದಾರೆ, ಆ ಬಗ್ಗೆ ಮತ್ತೆ 94(c) ಸೆಕ್ಷನ್‌ಗೆ ನಾವು ತಿದ್ದುಪಡಿ ಮಾಡಿ ಮುಂದೆ ಅವಧಿಯನ್ನು ವಿಸ್ತರಿಸಬೇಕಾಗುತ್ತದೆ ಇದರ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಂದ ವರದಿಯೊಂದನ್ನು ತರಿಸಿಕೊಂಡು, ಇವತ್ತು ಅಲ್ಲಿ ಯಾವ್ಯಾವ ರೀತಿಯಲ್ಲಿ ಜಾಗವನ್ನು ಅತಿಕ್ರಮಣ ಮಾಡಿಕೊಂಡಿದ್ದಾರೋ, ಅವೆಲ್ಲವನ್ನೂ ಪರಿಶೀಲಿಸಿ, ಅವಧಿಯನ್ನು ಹೊಸದಾಗಿ ವಿಸ್ತರಣೇ ಮಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ ಮಾನ್ಯ ಸದನ್ಯರಾದ ಜಯಪ್ರಕಾಶ್ ಹೆಗ್ಡೆಯವರು ಪ್ರಸ್ತಾಪಿಸುತ್ತಾ, ಇವತ್ತು ತಾತ್ಕಾಲಿಕವಾದ ಹಕ್ಕುಪತ್ರಗಳನ್ನು

ಕೊಟ್ಟಿದ್ದು, ಖಾಯಂ ಆದ ಹಕ್ಕುಪತ್ರಗಳನ್ನು ಕೊಟ್ಟಿಲ್ಲವೆನ್ನುವ ಮಾತುಗಳನ್ನು ಹೇಳಿದ್ದಾರೆ ಇದರ ಬಗ್ಗೆ specific ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ ಹೀಗಾಗಿ, ಅಂತಹದ್ದು ಗಮನಕ್ಕೆ ಬಂದಲ್ಲಿ, ನಾನು ಅದರ ಬಗ್ಗೆ action ತೆಗೆದುಕೊಳ್ಳುತ್ತೇನೆ ಮತ್ತು ಅಧಿಕಾರಿಗಳು ಈ ರೀತಿ ತೊಂದರೆ ಕೊಡುತ್ತಿದ್ದಾರೋ, ಅಂತಹವರ ಮೇಲೂ ನಾವು action ತೆಗೆದುಕೊಳ್ಳುವಂತಹ ಕೆಲಸ ಮಾಡುತ್ತೇವೆ ಸದಸ್ಯರಾದ ರಘುಪತಿ ಭಟ್ರವರು ಏನು ಹೇಳಿದ್ದಾರೆ, ಕೆಲವೊಮ್ಮೆ ಪ್ರಕರಣಗಳು ಪೆಂಡಿಂಗ್ ಉಳಿದಿವೆ ಮತ್ತು ಕೆಲವರು ಅಲ್ಲಿ ವಾಸ್ತವ್ಯ ಹೂಡಿಲ್ಲವೆಂಬ ವರದಿಯ ಆಧಾರದ ಮೇಲೆ ಸಲ್ಲಿಸಿದ್ದ ಅರ್ಜಿಗಳು reject ಆಗಿವೆಯೆಂಬ ಮಾತನ್ನು ಹೇಳಿದ್ದಾರೆ ಅಂತಹದ್ದು specific cases ಏನಾದರೂ ನಮ್ಮ ಗಮನಕ್ಕೆ ಬಂದಲ್ಲಿ, ನಾವು ಅವುಗಳನ್ನೂ ಪರಿಶೀಲಿಸುತ್ತೇವೆ

ಶ್ರೀ ಕೆ ರಘುಪತಿ ಭಟ್ ತಮ್ಮ ಉತ್ತರದಲ್ಲೇ ನನ್ನ ಕ್ಷೇತ್ರದಲ್ಲಿ ಸುಮಾರು 944 ಅರ್ಜಿಗಳು reject ಆಗಿದೆಯೆಂದು ಹೇಳಿದೀರಿ ಅದರಲ್ಲಿ ರಸ್ತೆ ಮಾರ್ಜಿನ್‌ನಲ್ಲಿ ಇದ್ದದ್ದು ಅಥವಾ ಯಾವುದಾದರೂ ಕೊಡುವುದಕ್ಕೆ ಆಗದಿರುವ ಜಾಗದ ಬಗ್ಗೆ ನಾನು ಕೇಳುತ್ತಿಲ್ಲ ಯಾರಿಗೆ ಸರ್ಕಾರಿ ಜಾಗದಲ್ಲಿ, ಕೊಡುವುದಕ್ಕೆ ಅರ್ಹತೆ ಇರುವ ಜಾಗದಲ್ಲಿ, ಗ್ರಾಮ ಕರಣಿಕರು ಅಲ್ಲಿಗೆ ಹೋದಾಗ ಅವರು ಅಲ್ಲಿ ವಾಸ್ತವ್ಯವಿಲ್ಲವೆಂಬ ಕಾರಣ ನೀಡಿ ವರದಿ ನೀಡಿದ್ದಾರೆ ಅಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಮತ್ತೊಮ್ಮೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ Reject ಆದ ಬಹಳಷ್ಟು ಪ್ರಕರಣಗಳಲ್ಲಿ ಕೆರೆ ಹೊಂಡ, ಇಂತಹ ಬೇರೆ ಬೇರೆ ಕಡೆಗಳಲ್ಲಿ ವಾಸವಾಗಿರುವವರ ಅರ್ಜಿಗಳನ್ನು ಅವರು reject ಮಾಡಿರುತ್ತಾರೆ ಮಾನ್ಯ ರಘುಪತಿ ಭಟ್ ರವರು ಮಾತನಾಡುತ್ತಾ, ಅಲ್ಲಿಗೆ Village Accountant ಮತ್ತು Revenue Inspector ಹೋದ ಸಂದರ್ಭದಲ್ಲಿ ಅವರು ಅಲ್ಲಿ ಇಲ್ಲವೆನ್ನುವ ವರದಿಯ ಆಧಾರದ ಮೇಲೆ ಅರ್ಜಿಗಳನ್ನು reject ಆಗಿವೆ ಎಂಬ ಮಾತುಗಳನ್ನು ಹೇಳುತ್ತಿದ್ದಾರೆ ಅಂತಹ specific ಆಗಿರುವ ಪ್ರಕರಣಗಳನ್ನು, ಅರ್ಜಿಗಳನ್ನು ನಮ್ಮ ಗಮನಕ್ಕೆ ತಂದಲ್ಲಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ direction ಕೊಡುತ್ತೇವೆ, ಪರಿಶೀಲಿಸುತ್ತೇವೆ

ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ . ಮಾನ್ಯ ಉಪಾಧ್ಯಕ್ಷರೆ, ನಾನು ಹಿಂದೆ ಸಚಿವರಲ್ಲಿ ಮನವಿ ಮಾಡಿಕೊಂಡಿದ್ದೆ From No 50 ಮತ್ತು 53ಯಲ್ಲಿ ಬಗರ್ ಹುಕುಂನಲ್ಲಿ ಮಂಜೂರಾದವರಿಗೆ ಅದರ ಮೌಲ್ಯ ಭಾರೀ ಕಡಿಮೆ ಇತ್ತು ಎಕರೆಗೆ 1,000 ರೂಪಾಯಿಯೂ ಇಲ್ಲ 94 (c) ನಲ್ಲಿ ಕೊಟ್ಟವರಿಗೆ market value

ಗಿಂತಲೂ ಹೆಚ್ಚಿದೆ ಹಿಂದೆ ಮಾನ್ಯ ಎಂ ಪಿ ಪ್ರಕಾಶ್ ಅವರಿದ್ದಾಗ ನಾನು ಹಾಗೂ ಜಯಪ್ರಕಾಶ್ ಹೆಗ್ಡೆ ಯವರು ಮನವಿ ಮಾಡಿದಾಗ ಎರಡೂವರೆ ಸೆಂಟ್ಸ್ ಫ್ರೀ ಎಂದು ಮಾಡಿದರು ಆದರೆ, ನಾನು ಹೇಳುವುದೇನೆಂದರೆ, 94(c) ರಲ್ಲಿ ಕೊಡಬೇಕೆಂದರೆ, 9 ಸೆಂಟ್ಸ್ ತನಕ ಅದ್ದರಿಂದ market value ಗಿಂತಲೂ ಹೆಚ್ಚಿದೆ ಅಲ್ಲಿ ಬಡವರೇ ಇರುವಂಥಾದ್ದು ಅದಕ್ಕೆ ಮೌಲ್ಯವನ್ನು ಭಾರೀ ಕಡಿಮೆ ಮಾಡಬೇಕೆಂಬುದು ನನ್ನ ಬೇಡಿಕೆಯಾಗಿದೆ

ಶ್ರೀ ಕೆ ಅಭಯಚಂದ್ರ. ಕೆಲವರಿಗೆ ಮಾತ್ರ 94(c) ರೀತ್ಯಾ ಜಾಗವನ್ನು grant ಮಾಡಿದರು ಯಾರೂ ಬರೀ ಹುಲ್ಲಿನ ಮನೆ ಮಾಡಿಕೊಂಡು ವಾಸಿಸುತ್ತಿದ್ದರೋ, ಅವರಿಗೆ ಆ ಸಂದರ್ಭದಲ್ಲಿ grant ಮಾಡಲಿಲ್ಲ ಆದರೆ, ಇವತ್ತು ಅಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಆದುದರಿಂದ ಯಾರು 94(c) ರೀತ್ಯಾ ಅರ್ಜಿಗಳನ್ನು ಕೊಟ್ಟು ಮನೆ ಕಟ್ಟಿ ವಾಸಿಸುತ್ತಿದ್ದಾರೋ, ಅವರಿಗೇ ಅದನ್ನು grant ಮಾಡಬೇಕು ಇವತ್ತು ಹಕ್ಕುಪತ್ರಗಳಿಲ್ಲದೇ ಜನರು ಬಹಳ ತೊಂದರೆಗೊಳಗಾಗುತ್ತಿದ್ದಾರೆ ಒಂದು ಕಡೆ ಆಶ್ರಯ ಯೋಜನೆಲ್ಲಿ ಅವರಿಗೆ ಮನೆ ಕೊಡುವುದಕ್ಕೆ ಸಾಧ್ಯವಿಲ್ಲ ನಿವೇಶನರಹಿತ ಪಟ್ಟಿಯಲ್ಲಿ ಅವರು ಬರುವುದಿಲ್ಲ ಆದುದರಿಂದ, ಅವರಿಗೆ ವಿಶೇಷವಾದ ಕರುಣೆ ತೋರಿಸಿ ತಾವು ಯಾರು 94(c) ರೀತ್ಯಾ ಅರ್ಜಿಗಳನ್ನು ಸಲ್ಲಿಸಿ ಮನೆ ಕಟ್ಟಿಕೊಂಡು ವಾಸಿಸುತ್ತುದ್ದಾರೋ, ಅವರುಗಳ ಅರ್ಜಿಗಳನ್ನು ಪುನಃ ಪರಿಶೀಲಿಸಿ ಆ ಜಾಗವನ್ನು ಅವರಿಗೇ ಕೊಡುವಂತಹ ಕೆಲಸವಾಗಬೇಕಾಗಿದೆ

ಒಬ್ಬ ಮಾನ್ಯ ಸದಸ್ಯರು ಕೆಲವರಿಗೆ ಜಾಗ ಇದೆ, ಹಕ್ಕುಪತ್ರವಿಲ್ಲ ಕೆಲವರಿಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದರೂ, ಜಾಗ ಕೊಡಲಿಲ್ಲ ಇದು ನಮ್ಮ ಕ್ಷೇತ್ರದಲ್ಲಿನ ಪರಿಸ್ಥಿತಿಯಾಗಿದೆ ಈ ಸಮಸ್ಯೆ ಪರಿಹಾರವಾಗಬೇಕಾಗಿದೆ ಮತ್ತೊಂದು, ಯಾರು ಈಗ ಆಶ್ರಯದ ಮುಖಾಂತರ ಲೋನ್ ಪಡೆದುಕೊಂಡಿದ್ದಾರೋ, ಅವರು ಕೆಲವೊಂದು ಕಾರಣಗಳಿಗಾಗಿ ಕಟ್ಟದೇ ಇರುವುದರಿಂದ ಬಡ್ಡಿ ಜಾಸ್ತಿಯಾಗಿರುತ್ತದೆ ಆದಕಾರಣ, ಯಾವ ಬಡವರು ಆಶ್ರಯ ಮುಖಾಂತರ ಲೋನ್ ಪಡೆದುಕೊಂಡು ಕಟ್ಟಿದ್ದಾರೋ, ಅವರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಸರ್ಕಾರದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ ಅಧ್ಯಕ್ಷರೆ, ಈಗ ಎಲ್ಲ ಶಾಸಕರ ಅಭಿಪ್ರಾಯವೇನೆಂದರೆ, ಈಗ ಯಾರ್ಯಾರು ಮನೆಗಳನ್ನು ಕಟ್ಟಿಕೊಂಡಿದ್ದಾರೋ, ಅವರುಗಳಿಗೆ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಮತ್ತೊಂಮ್ಮೆ ಅವಕಾಶ ಕೊಡಬೇಕೆಂಬುದಾಗಿದೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ ಏಕೆಂದರೆ, Section 94(c)ಗೆ ಮತ್ತೆ amend ಮಾಡಿ ಅವಧಿ ವಿಸ್ತರಣೆ ಮಾಡಬೇಕಾಗುತ್ತದೆ

ಅದರ ಬಗ್ಗೆಯೂ ಪರಿಶೀಲಿಸುತ್ತೇವೆ ಹಾಲಾಡಿ ಶ್ರೀನಿವಾಸ ಶೆಟ್ಟಿಯವರು ಮಾತನಾಡಿ, ರೇಟ್ ಜಾಸ್ತಿಯಾಗಿದೆ, ಹೆಚ್ಚು– ಕಡಿಮೆಯಾಗಿದೆ ಎಂದರು From 50 ಮತ್ತು 53 ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ, ಅಂದರೆ, regularize ಮಾಡುವುದಕ್ಕೆ ಏನು fees ಜಾಸ್ತಿ ಇದೆಯೆಂಬ ಮಾತನ್ನು ಹೇಳಿದರು 20x30 ಅಳತೆಗೆ 94(c) ನಲ್ಲಿ ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ನಾವು ಯಾವ ಸೈಟುಗಳನ್ನು allot ಮಾಡುತ್ತೇವೋ, ಅಲ್ಲಿ 20x30 ಸೈಟುಗಳಿದ್ದರೆ, ಅದು ಉಚಿತವಾಗಿದೆ ಅದನ್ನು ನಾವು ಉಚಿತವಾಗಿ ಕೊಡುತ್ತೇವೆ ಅದಕ್ಕೂ ಹಿಂದೆ ಏನು ವಿಸ್ತರಣೆ ಇದೆ, ಅದಕ್ಕೆ ಮಾತ್ರ ನಾವು charge ಮಾಡುತ್ತೇವೆ ಆದರೆ, market rateಗಿಂತಲೂ ಕಡಿಮೆ ಇರುತ್ತದೆ ಆದರೂ ಇವತ್ತು ಅವರು ಏನು ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಅದು difference ಬಹಳ ಇದೆ ಎಂಬುದಾಗಿದೆ ಅದರ ಬಗ್ಗೆ ನಾನು ಕೂಲಂಕಷವಾಗಿ ವಿಚಾರಣೆ ಮಾಡಿ, ಅತಿಯಾಗಿ ಜಾಸ್ತಿಯಾಗಿದ್ದರೆ, ಅದನ್ನು ಕಡಿಮೆಗೊಳಿಸುವ ಬಗ್ಗೆ ಪರಿಶೀಲಿಸುತ್ತೇವೆ

ರಾಜ್ಯದ ಅರಣ್ಯ ಭೂಮಿ

153 (1378) ಶ್ರೀ ಡಿ ಆರ್ ಪಾಟೀಲ್ (ಗದಗ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ ?

ಅ) ರಾಜ್ಯದಲ್ಲಿ ಸರ್ಕಾರಿ ಒಡೆತನದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ?

ಆ) ಖಾಸಗಿ ಒಡೆತನದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ?

ಇ) ಇದು ರಾಜ್ಯದ ಒಟ್ಟು ಭೌಗೋಲಿಕ ಕ್ಷೇತ್ರದಲ್ಲಿಯ ಪಾಲು ಎಷ್ಟು ?

ಈ) ಅರಣ್ಯ ಸಮಿತಿಗಳ ಉಸ್ತುವಾರಿಯಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ?

ಉ) ರಾಜ್ಯದಲ್ಲಿ ಪಂಚಾಯಿತಿ ಮಟ್ಟದಲ್ಲಿ ಅರಣ್ಯ ಸಮಿತಿಗಳನ್ನು ರಚಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಸಿ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) 43,35,639 ಹೆಕ್ಟೇರುಗಳು

ಆ) 5,407 ಹೆಕ್ಟೇರುಗಳು

ಇ) ರಾಜ್ಯದ ಒಟ್ಟು ಭೌಗೋಳಿಕ ಕ್ಷೇತ್ರ ಅಂದರೆ, 1,91,79,100 ಹೆಕ್ಟೇರ್‌ಗೆ ಹೋಲಿಸಿದಲ್ಲಿ ರಾಜ್ಯ ಅರಣ್ಯ ವಿಸ್ತೀರ್ಣ ಶೇಕಡಾ 22 61 ಇರುತ್ತದೆ

ಈ) ಒಟ್ಟು 3,40,391 ಹೆಕ್ಟೇರ್‌ಗಳು

ಉ) ಸರ್ಕಾರಿ ಆದೇಶ ಸಂಖ್ಯೆ ಎಫ್‌ಇಇ 50 ಎಫ್‌ಎಪಿ 2000 ಬೆಂಗಳೂರು, ದಿನಾಂಕ 5–2–2004 ರ ಪ್ರಕಾರ ಪಂಚಾಯತ್ ಕಾಯ್ದೆ